ಮಾಡಿದ್ರೂ ಮೂರೂವರೆ ಮೀಟರ್‌ನ ರಸ್ತೆ ಸಾಕು. ಕೆಳಗಡೆ ಇರೋದು ಫ್ಲೋಯಿಂಗ್ ವಾಟರ್ ಅಲ್ಲ, ಸ್ಟಾಗ್ನೆಂಟ್ ವಾಟರ್ ಅಷ್ಟೇ. ಹ್ಯೂಮ್‌ಪೈಪ್ ಹಾಕಿ, ಮೇಲಕ್ಕೆ ಎಂಬ್ಯಾಂಕ್‌ಮೆಂಟ್ ಮಾಡಿದ್ರೆ ಸಾಕು, ಐವತ್ತು ಲಕ್ಷಕ್ಕಿಂತ ಕಡಿಮೆಗೇ ಮುಗಿದುಹೋಗುತ್ತೆ...' ಎಂದಾಗ ಎಲ್ಲರೂ ಮೂಕವಿಸ್ಮಿತರಾದರು. ಅರೆ, ಇಂಥದೊಂದು ಇನ್ನೋವೇಟೀವ್ ಐಡಿಯ ತಮಗೆ ಬರಲೇ ಇಲ್ಲವಲ್ಲ ಎಂದು ಕೆಳಹಂತದ ಅಧಿಕಾರಿಗಳು ತಲೆ ಅಲ್ಲಾಡಿಸಿದರು.

ಬೆಂಗಳೂರಿಗೆ ಹೋದವರೇ ಅಂದಾಜು ತರಿಸಿಕೊಂಡರು. ತಾತ್ಕಾಲಿಕವಾದ ಕಲ್ವರ್ಟ್ ಬದಲು 'ಸೇತುಬಂಧನ' ಯೋಜನೆಯಡಿ ಮಂಜೂರಾಗಿದ್ದ ಹಣದಲ್ಲಿ ಕಾಂಕ್ರೀಟ್ ಬ್ರಿಡ್ಜ್ ಅನ್ನೇ ಅನುಮೋದಿಸಿಬಿಟ್ಟರು. ಮುಂದಿನ ತಿಂಗಳೇ ಟೆಂಡರೂ ಕರೆದು, ಏಜೆನ್ಸಿಯೂ ಫಿಕ್ಸ್ ಆಗಿ ವರ್ಕ್ ಆರ್ಡರನ್ನೂ ಕೊಟ್ಟುಬಿಟ್ಟರು.

ಬೇಸಿಗೆ ಬಂದು, ಅಮಾವಾಸ್ಯೆಗೆ ಸಮುದ್ರದ ನೀರು ಇಳಿವಂತೆ ಇಳಿಯುತ್ತಿದ್ದಂತೆಯೇ ಒಂದರ ಪಕ್ಕ ಒಂದೊಂದು ಪಿಲ್ಲರ್‌ಗಳು ಎದ್ದವು. ಇನ್ನೂ ಕಟ್ಟುತ್ತಿದ್ದಂತೆಯೇ ಅದರ ತಾಕತ್ತನ್ನು ಪರೀಕ್ಷಿಸುವವರಂತೆ ಊರ ಯುವಕರು, ಮಕ್ಕಳಾದಿಯಾಗಿ ಎಲ್ಲರೂ ಪಿಲ್ಲರ್‌ನಿಂದ ಪಿಲ್ಲರ್‌ಗೆ, ಆ ತುದಿಯಿಂದ ಈ ತುದಿಗೆ, ಈ ತುದಿಯಿಂದ ಆ ತುದಿಗೆ, ಲಂಕೆಯ ಸೇತುವೆಯ ಮೇಲೆ ಥೇಟ್ ಕೋತಿಗಳು ಹಾರಿಹಾರಿ ಖುಷಿಪಟ್ಟಂತೆ ಖುಷಿಪಟ್ಟರು. ನೋಡನೋಡುತ್ತಿದ್ದಂತೆಯೇ ಎಲ್ಲವೂ ನೇರೂಪಾಗಿ ಇಲ್ಲಿ ಇಂಥದೊಂದು ಸಮಸ್ಯೆಯಿತ್ತು ಎಂಬುದೇ ಗೊತ್ತಾಗದಂತಾಗಿಹೋಗಿತ್ತು.

ಬ್ರಿಡ್ಜ್ ಸಿದ್ಧವಾಗುತ್ತಿದ್ದಂತೆಯೇ ಎಂಎಲ್‌ಎ ಹಾಲೇಶಪ್ಪನ ಕಡೆಯವರು ಬಂದು ಉದ್ಘಾಟನೆಗೆ ದಿನಾಂಕ ನಿಗದಿಪಡಿಸಿದರು. ಅಮೃತಶಿಲೆಯ ಕಲ್ಲೇ ಬೇಕೆಂದು ಅಧಿಕಾರಿಗಳಿಗೆ ತಾಕೀತು ಮಾಡಿ, ಅದರಲ್ಲಿ ತಾವೇ ಉದ್ಘಾಟನೆ ಮಾಡಿದ್ದೆಂದು ಕೆತ್ತಿಸಿಕೊಂಡರು. ಆದರೆ ಊರವರು, 'ಈ ಸೇತುವೆ ಕಟ್ಟೋಕ್ಕೆ ಕಾರಣವೇ ಸರ್ಕಾರದ ಕಾರ್ಯದರ್ಶಿಯವರು. ಅದರಲ್ಲಿ ಅವರ ಹೆಸರೂ ಬರಲೇಬೇಕು' ಎಂದು ಹಟ ಹಿಡಿದರು. ಸ್ಥಳೀಯ ಎಂಜಿನಿಯರ್‌ಗೆ ಪೀಕಲಾಟಕ್ಕಿಟ್ಟುಕೊಂಡಿತು. 'ಉದ್ಘಾಟನೆಗೆ ಬರೋಕ್ಕೆ ತಮಗೆ ಪುರುಸೊತ್ತಿಲ್ಲವೆಂದು ದೊಡ್ಡ ಸಾಹೇಬ್ರು ಹೇಳಿದ್ದಾರೆ' ಎಂದು ಸಮಜಾಯಿಷಿ ನೀಡಿದರು. 'ಕಾರ್ಯಕ್ರಮಕ್ಕೆ ಹಾಜರಾಗದೇ ಇರುವವರ ಹೆಸರನ್ನು ಪ್ರೋಟೋಕಾಲ್ ಪ್ರಕಾರ ಹಾಕೊಂಗಿಲ್ಲರೀ' ಎಂದು ಅಪ್ಪಣೆ ಕೊಟ್ಟರು ಶಾಸಕರು. ಸಂದಿಗ್ಧಕ್ಕೀಡಾದ ಕಾರ್ಯಪಾಲಕ ಎಂಜಿನಿಯರ್ರು, ಮುಖ್ಯ ಎಂಜಿನಿಯರ್ ಜೊತೆ ಫೋನಲ್ಲಿ ಮಾತಾಡಿದರು. ಅವರೂ, 'ಅವರು ಹೇಳಿದ್ದು ಕರೆಕ್ಟು ರೀ... ಸಾಹೇಬ್ರ ಹೆಸರು ಹಾಕಬಾರದಂತೆ...' ಎಂದು ಹೇಳಿ ಸೇತುವೆ ಉದ್ಘಾಟನೆಗೆ ಅನುಮತಿ ಕೊಟ್ಟೇಬಿಟ್ಟರು.

ಸೇತುವೆ ತುಂಬಾ ತಳಿರು ತೋರಣ, ಶಾಸಕರ–ಮಂತ್ರಿಗಳ ಪಕ್ಷದ ಬಾವುಟ, ಆಳೆತ್ತರದ ಕಟೌಟ್‌ಗಳೆಲ್ಲ ರಾರಾಜಿಸಿದವು. ನಗರದಿಂದ ಮಂತ್ರಿಗಳು, ಅಧಿಕಾರಿಗಳು, ಗುತ್ತಿಗೆದಾರರು, ಪತ್ರಕರ್ತರು, ದೃಶ್ಯ ಮಾಧ್ಯಮದವರು ಎಲ್ಲ ಸೇರಿ ಒಂದೈವತ್ತು ಜನ ಸೇರಿ ಸೇತುವೆಯನ್ನು ಉದ್ಘಾಟನೆ ಮಾಡಿಯೇಬಿಟ್ಟರು. ಪತ್ರಿಕೆಯ, ಟಿವಿಯ ತುಂಬೆಲ್ಲ ಟೇಪು ಕತ್ತರಿಸಿದ ಮಂತ್ರಿಗಳ ಫೋಟೊ... ಕ್ರೇನಿನಿಂದ ದೊಡ್ಡ ಆ್ಯಪಲ್ ಹಾರ ಹಾಕಿಸಿಕೊಂಡು ತಾವು ಮಾಡಿದ ಸಾಧನೆಗೆ ಮತ್ತೊಂದು ಗರಿ ಮುಡಿಸಿಕೊಂಡಂತೆ ಬೀಗಿದ ಶಾಸಕರ ಫೋಟೊಗಳೆಲ್ಲ ನಿರಂತರವಾಗಿ ರಾರಾಜಿಸಿದವು.

ಆದರೆ ಊರಿನ ಒಂದೇ ಒಂದು ನರಪಿಳ್ಳೆಯೂ ಅತ್ತ ಸುಳಿಯಲಿಲ್ಲ...

ಆಗಲೇ ಮುದುಕರಾಗುತ್ತ ಬಂದಿದ್ದ ಯುವಕಸಂಘದ ರತ್ನಾಕರ, ಗೋವಿಂದರಾಜ ಬೆಂಗಳೂರಿನ ರೈಲು ಹತ್ತಿದರು. ಹುಡುಕಿಕೊಂಡು ಹೋಗಿ ವಿಕಾಸಸೌಧದ ದೊಡ್ಡ ಸಾಹೇಬರ ಛೇಂಬರ್ರು ತಲುಪಿದರು. ಬಂಗಾರದ ಅಕ್ಷರದಲ್ಲಿ ಕೆತ್ತಿದ್ದ 'ಗೋಪಾಲಕೃಷ್ಣ ಬಿಇ, ಎಂಐಇ, ಸರ್ಕಾರದ

